# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

ಜ್ಞಾನ ಸಾಗರ ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ – 583105

**VIJAYANAGARA SRI KRISHNADEVARAYA UNIVERSITY**

"Jnana Sagara" Campus, Vinayaka Nagara, Contonment, Ballari – 583105

ಕುಲಸಚಿವರು (ಮೌಲ್ಯಮಾಪನ) ದೂರವಾಣಿ : 08392-241011


ಸಂಖ್ಯೆ. ವಿಶ್ರೀಕೃವಿಬ/ಪರೀಕ್ಷಾ/ಬಿ.ಇಡಿ/ವೇಳಾಪಟ್ಟಿ/2023-24/652 ದಿನಾಂಕ: 23/06/2023

## ಪರೀಕ್ಷಾ ಅಧಿಸೂಚನೆ

ವಿಷಯ:- ಜುಲೈ-2023ರ ತಿಂಗಳಿನಲ್ಲಿ ಜರುಗಲಿರುವ 1ನೇ ಮತ್ತು 3ನೇ ಸೆಮಿಸ್ಟರ್ (NEP) ಬಿ.ಇಡಿ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಹಾಗೂ ಶುಲ್ಕ ಪಾವತಿಸುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 23.06.2023.

*****

ಜುಲೈ-2023 ರಲ್ಲಿ ಜರುಗಲಿರುವ ಬಿ.ಇಡಿ (NEP) 1ನೇ ಮತ್ತು 3ನೇ ಸೆಮಿಸ್ಟರ್‌ನ (ಕ್ರಮಬದ್ಧ, ಪುನರಾವರ್ತಿತ) ಮತ್ತು CBCS 3ನೇ ಸೆಮಿಸ್ಟರ್‌ನ (ಪುನರಾವರ್ತಿತ) ವಿದ್ಯಾರ್ಥಿಗಳು ಲಿಖಿತ ಪರೀಕ್ಷೆಗಳ ಪರೀಕ್ಷಾ ಶುಲ್ಕ ಅರ್ಜಿಗಳನ್ನು ಸ್ವೀಕರಿಸುವ ದಿನಾಂಕ ಹಾಗೂ ಪರೀಕ್ಷೆಗಳ ಪ್ರಾರಂಭವಾಗುವ ವಿವರಗಳನ್ನು ಈ ಕೆಳಗಿನಂತೆ ನಮೂದಿಸಲಾಗಿದೆ.

**ಭಾಗ-1**

| ಕ್ರಮ ಸಂಖ್ಯೆ | ವಿವರಗಳು | ಬಿ.ಇಡಿ 1ನೇ ಮತ್ತು 3ನೇ ಸೆಮಿಸ್ಟರ್ |
|---|---|---|
| 01 | ಪರೀಕ್ಷಾ ಶುಲ್ಕ | ರೂ. 1,550/- |
| 02 | ಅಂಕಪಟ್ಟಿ ಶುಲ್ಕ | ರೂ. 200/- |

**ಭಾಗ-2**

| ಕ್ರಮ ಸಂಖ್ಯೆ | ವಿವರಗಳು | ದಿನಾಂಕ |
|---|---|---|
| 1. | ವಿದ್ಯಾರ್ಥಿಗಳ ಹಾಜರಾತಿ ಮತ್ತು ಆಂತರಿಕ ಅಂಕಗಳನ್ನು UUCMS ಪೋರ್ಟಲ್ ಮೂಲಕ ಸಲ್ಲಿಸುವ ದಿನಾಂಕ. | 23.06.2023 ರಿಂದ 30.06.2023 |
| 2. | ವಿದ್ಯಾರ್ಥಿಗಳ ಆನ್‌ಲೈನ್ UUCMS ಪೋರ್ಟಲ್‌ನಲ್ಲಿ ಪರೀಕ್ಷಾ ಶುಲ್ಕದೊಂದಿಗೆ ಅರ್ಜಿ ಸಲ್ಲಿಸುವ ಕಡೆಯ ದಿನಾಂಕ (ದಂಡರಹಿತ) | 23.06.2023 ರಿಂದ 02.07.2023 |
| 3. | ವಿದ್ಯಾರ್ಥಿಗಳ ಆನ್‌ಲೈನ್ UUCMS ಪೋರ್ಟಲ್‌ನಲ್ಲಿ ಪ್ರಥಮ ದಂಡ ಸಹಿತ ಪರೀಕ್ಷಾ ಶುಲ್ಕದೊಂದಿಗೆ ಅರ್ಜಿ ಸಲ್ಲಿಸುವ ಕಡೆಯ ದಿನಾಂಕ ಪ್ರತಿ ದಿನ ರೂ. 200 ರಂತೆ ದಂಡ ಸಹಿತ | 03.07.2023 ರಿಂದ 04.07.2023 |
| 4. | ವಿದ್ಯಾರ್ಥಿಗಳ ಆನ್‌ಲೈನ್ UUCMS ಪೋರ್ಟಲ್‌ನಲ್ಲಿ ಪ್ರಥಮ ದಂಡ ಸಹಿತ ಪರೀಕ್ಷಾ ಶುಲ್ಕದೊಂದಿಗೆ ಅರ್ಜಿ ಸಲ್ಲಿಸುವ ಕಡೆಯ ದಿನಾಂಕ ಪ್ರತಿ ದಿನ ರೂ. 700 ರಂತೆ ದಂಡ ಸಹಿತ | 05.07.2023 ರಿಂದ 06.07.2023 |
| 5. | ಪ್ರಾಂಶುಪಾಲರು ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳ ಮಾಹಿತಿಯನ್ನು (Students List) ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ Hard Copyಯನ್ನ ಮತ್ತು ಈ-ಮೇಲ್ (**b.ed.practical2022@gmail.com**)ಗೆ ಮೂಲಕ Soft Copyಯನ್ನು ಸಲ್ಲಿಸುವ ದಿನಾಂಕ. | 08.07.2023 |
| 6. | ಪರೀಕ್ಷಾ ಪ್ರವೇಶ ಪತ್ರಗಳನ್ನು (Hall Ticket) UUCMS ಪೋರ್ಟಲ್‌ನಿಂದ ಪಡೆಯುವ ದಿನಾಂಕ. | 07.07.2023 ರಿಂದ 09.07.2023 |
| 7. | ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕ: | 10.07.2023 |

ಪರೀಕ್ಷಾ ತೆಗೆದುಕೊಳ್ಳಲು ಅರ್ಹರಾದ ಅಭ್ಯರ್ಥಿಗಳು ನಿಯಮಾನುಸಾರ ತಮ್ಮ ಅರ್ಜಿಯನ್ನು ಮತ್ತು ಪರೀಕ್ಷಾ ಶುಲ್ಕವನ್ನು ಆನ್‌ಲೈನ್ ಮೂಲಕ ಮಾತ್ರ ಪಾವತಿಸಲು ತಿಳಿಸಲಾಗಿದೆ.

**<u>ಪ್ರಥಮ ಮತ್ತು ತೃತೀಯ ಸೆಮಿಸ್ಟರ್ ಗೆ ಪರೀಕ್ಷಾ ಶುಲ್ಕ ಪಾವತಿಸುವ ವಿಧಾನ (Exam Application Submission by Student)</u>**

- Open the portal using URL- : https://uucms.karnataka.gov.in/
  Student Login → Student Login Home page will be displayed → Go to Exam-> Exam → Applications Click On Apply for Exam Notification → Click on Pay Fees button → Click on Yes, to confirm to pay Exam Application Fee **(Note: Before Payment verify all the details).** Click on Yes, to confirm to pay Exam Application Fee.

: ಎಲ್ಲಾ ಮಹಾವಿದ್ಯಾಲಯಗಳ ಪ್ರಾಂಶುಪಾಲರು/ವಿಭಾಗಗಳ ಮುಖ್ಯಸ್ಥರು/ವಿದ್ಯಾರ್ಥಿಗಳಿಗೆ ಸೂಚನೆಗಳು:

1. ವಿದ್ಯಾರ್ಥಿಗಳು ಆನ್ ಲೈನ್ (Online) ಮುಖಾಂತರ ಅರ್ಜಿ ಸಲ್ಲಿಸಲು 1ನೇ ಮತ್ತು 3ನೇ ಸೆಮಿಸ್ಟರ್ (NEP) ವಿದ್ಯಾರ್ಥಿಗಳು (UUCMS) ಮೂಲಕ login ಆಗಿ ನೋಂದಣಿ ಸಂಖ್ಯೆ ನಮೂದಿಸಿ ಪರೀಕ್ಷೆ ತೆಗೆದುಕೊಳ್ಳುವ ಸೆಮಿಸ್ಟರ್‌ವಾರು/ವಿಷಯವಾರು ಗುರುತು ಮಾಡಿ, ಶುಲ್ಕದ ವಿವರಗಳುಳ್ಳ ಅರ್ಜಿ ಮುದ್ರಿಸಿ, ಶುಲ್ಕ ಭರಿಸಿದ ನಂತರ ಪ್ರತಿಯನ್ನು ತಕ್ಷಣ ವಿದ್ಯಾರ್ಥಿಗಳು ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು/ಮಹಾವಿದ್ಯಾಲಯಗಳಲ್ಲಿ ಸಲ್ಲಿಸಬೇಕು.
2. CBCS 3ನೇ ಸೆಮಿಸ್ಟರ್‌ನ (ಪುನರಾವರ್ತಿತ) ವಿದ್ಯಾರ್ಥಿಗಳು http://student.logisys.org/vskub/ ನಲ್ಲಿ ಆಗಿ ನೋಂದಣಿ ಸಂಖ್ಯೆ ನಮೂದಿಸಿ ಪರೀಕ್ಷೆ ತೆಗೆದಿಕೊಳ್ಳುವ ಸೆಮಿಸ್ಟರ್‌ವಾರು/ವಿಷಯವಾರು ಗುರುತು ಮಾಡಿದ ನಂತರ ಶುಲ್ಕದ ವಿವರವುಳ್ಳ ಅರ್ಜಿ ಮುದ್ರಿಸಿ ಮತ್ತು ಶುಲ್ಕ ಭರಿಸಿದ ನಂತರ ಶುಲ್ಕದ ಪ್ರತಿಯನ್ನು ತಕ್ಷಣ ಸಂಬಂಧಿಸಿದ ಮಹಾವಿದ್ಯಾಲಯಗಳಿಗೆ ಸಲ್ಲಿಸತಕ್ಕದ್ದು.
3. SC/ST ಮತ್ತು OBC ಅಭ್ಯರ್ಥಿಗಳು ಹಾಗೂ ಸರ್ಕಾರಿ ಆದೇಶಗಳನ್ವಯ ವಾರ್ಷಿಕ ಆದಾಯದ ಮಿತಿಯೊಳಗೆ ಬರುವ ಅಭ್ಯರ್ಥಿಗಳಿಗೆ ವಿದ್ಯಾರ್ಥಿ ವೇತನ ಪಡೆಯುವುದರಿಂದ ಶುಲ್ಕ ವಿನಾಯಿತಿ ಇರುವುದಿಲ್ಲ. ಕಾರಣ ಅವರುಗಳು ಪೂರ್ಣ ಶುಲ್ಕ ಭರಿಸಬೇಕು.
4. ಪರೀಕ್ಷೆ ತೆಗೆದುಕೊಳ್ಳುವ ಪುನರಾವರ್ತಿತ (Repeaters) ವಿದ್ಯಾರ್ಥಿಗಳು ಪೂರ್ಣ ಶುಲ್ಕವನ್ನು ಪಾವತಿಸತಕ್ಕದ್ದು.
5. ಅರ್ಜಿ ಸಲ್ಲಿಸುವ ಅಭ್ಯರ್ಥಿಯು ತನ್ನ ನೋಂದಣಿ ಸಂಖ್ಯೆಯನ್ನು ಬಿಟ್ಟು ಬೇರೆ ನೋಂದಣಿ ಸಂಖ್ಯೆ ಅಥವಾ ಬೇರೆ ವಿಷಯಗಳನ್ನು ನಮೂದಿಸಿದರೆ ಅಂತಹ ಪ್ರಕರಣಗಳನ್ನು ವಿಶ್ವವಿದ್ಯಾಲಯವು ಸರಿಪಡಿಸಲಾಗುವುದಿಲ್ಲ.
6. ಪರೀಕ್ಷಾ ಶುಲ್ಕವನ್ನು ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕಗಳನ್ನು ಯಾವದೇ ಕಾರಣಕ್ಕೂ ವಿಸ್ತರಿಸಲಾಗುವುದಿಲ್ಲ ಮತ್ತು ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಕುಲಸಚಿವರು (ಮೌಲ್ಯಮಾಪನ)
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

<u>ಪ್ರತಿಗಳು:</u>

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. ರವರಿಗೆ ಮಾಹಿತಿಗಾಗಿ.
2. ಕುಲಸಚಿವರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. ರವರಿಗೆ ಮಾಹಿತಿಗಾಗಿ.
3. ಹಣಕಾಸು ಅಧಿಕಾರಿಗಳು ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. ರವರಿಗೆ ಮಾಹಿತಿಗಾಗಿ.
4. ನಿರ್ದೇಶಕರು, UUCMS ವಿಭಾಗ, ಬೆಂಗಳೂರು.
5. ಮೇ// ಲಾಜಿಸಿಸ್, ಬೆಂಗಳೂರು, ಶಾಖೆ ವಿಶ್ರೀಕೃ ವಿಶ್ವವಿದ್ಯಾಲಯ ಆವರಣ, ಬಳ್ಳಾರಿ.
5. ಪ್ರಾಂಶುಪಾಲರು, ಬಳ್ಳಾರಿ, ವಿಜಯನಗರ ಮತ್ತು ಕೊಪ್ಪಳ ಜಿಲ್ಲೆಯ ಈ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಎಲ್ಲಾ ಬಿ.ಇಡಿ ಮಹಾವಿದ್ಯಾಲಯಗಳು.
6. ಕಛೇರಿ ಪ್ರತಿ.